**ಕರ್ನಾಟಕ ಸರ್ಕಾರ**

**(ಸಹಕಾರ ಇಲಾಖೆ)**

**ಸಹಕಾರ ಸಂಘಗಳ ನಿಬಂಧಕರ ಕಛೇರಿ, ನಂ.1 ಅಲಿ ಆಸ್ಕರ ರಸ್ತೆ, ಬೆಂಗಳೂರು-560052**

**ಸಂಖ್ಯೆ; ಆರ್ಎಸ್ಆರ್/ಸೌಕಾ/ಉ.ನಿ.ತಿ/58/2015-2016** **ದಿನಾಂಕ; 11 -11-2015**

**ವಿಷಯ;-** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು, ಇದರ ಉಪವಿಧಿಗಳ ತಿದ್ದುಪಡಿ ಅನುಮೋದನೆ ಬಗ್ಗೆ.

**ಉಲ್ಲೇಖ:-** ವ್ಯವಸ್ಥಾಪಕ ನಿರ್ದೇಶಕರು, ಸಂಯುಕ್ತ ಸೌಹಾರ್ದ ಸಹಕಾರಿ ನಿ., ಬೆಂಗಳೂರು, ಇವರ ಉಪವಿಧಿಗಳ ತಿದ್ದುಪಡಿ ಪ್ರಸ್ತಾವೆ ದಿನಾಂಕ:29-9-2015.

**ಪ್ರಸ್ತಾವನೆ;-**

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು, ಈ ಸಹಕಾರಿಯು, ಉಪವಿಧಿಗಳ ಸಂಖ್ಯೆ: 21(4) ಮತ್ತು 35ಎ ಗಳಿಗೆ ತಿದ್ದುಪಡಿ ತರಲು ಉದ್ದೇಶಿಸಿ, ದಿನಾಂಕ:20-8-2015 ರಂದು ಜರುಗಿದ ಸರ್ವಸದಸ್ಯರ ಸಾಮಾನ್ಯ ಸಭೆಯ ಅನುಮೋದನೆ ಪಡೆದು, ಉಪವಿಧಿಗಳ ತಿದ್ದುಪಡಿಗಾಗಿ ಉಲ್ಲೇಖದ ಪತ್ರದ ಮೂಲಕ ಸಲ್ಲಿಸಿರುವ ಪ್ರಸ್ತಾವೆಯನ್ನು ಪರಿಶೀಲಿಸಿ ಈ ಕೆಳಕಂಡ ಆದೇಶವನ್ನು ಹೊರಡಿಸಿದೆ.

**ಆದೇಶ**

ಪ್ರಸ್ತಾವನೆಯಲ್ಲಿ ಉಲ್ಲೇಖಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 ರ ಪ್ರಕರಣ 11(4) ರಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ ಎಂ.ಕೆ.ಅಯ್ಯಪ್ಪ ಭಾ.ಆ.ಸೇ. ಸಹಕಾರಿಗಳ ನಿಬಂಧಕರು, ಕರ್ನಾಟಕ ರಾಜ್ಯ, ಬೆಂಗಳೂರು, ಆದ ನಾನು, ಸಹಕಾರಿಯ ಉಪವಿಧಿಗಳ ಸಂಖ್ಯೆ: 21(4) ಮತ್ತು 35ಎ ಗಳ ತಿದ್ದುಪಡಿಗಳನ್ನು ಆದೇಶಕ್ಕೆ ಲಗತ್ತಿಸಿರುವ ನಮೂನೆ-5 ರಲ್ಲಿರುವಂತೆ ಅನುಮೋದಿಸಿ ನೋಂದಾಯಿಸಿರುತ್ತೇನೆ.

ಉಪವಿಧಿಗಳ ತಿದ್ದುಪಡಿಗೆ ಅನುಮೋದನೆ ನೀಡಿ ನೋಂದಾಯಿಸಿದ ಈ ಉಪವಿಧಿಗಳನ್ನು ಮೂಲ ಉಪವಿಧಿಗಳೊಂದಿಗೆ ಸೇರಿಸಿ, ಸಹಕಾರಿಯಲ್ಲಿ ಸಂರಕ್ಷಿಸಿಟ್ಟು ಜಾರಿಗೆ ತರತಕ್ಕದ್ದು.

ಉಪವಿಧಿಗಳು ನೋಂದಾಯಿಸಿದ ದಿನಾಂಕದಿಂದ ಜಾರಿಗೆ ಬರುತ್ತವೆ. ಈ ಆದೇಶವನ್ನು ನನ್ನ ಸಹಿ ಮತ್ತು ಕಛೇರಿ ಮುದ್ರೆಯೊಂದಿಗೆ ದಿನಾಂಕ: 7-11-2015 ರಂದು ಹೊರಡಿಸಿದೆ.

Office of the Registrar of Co-operative Societies, GOVT. OF KARNATAKA, # 1, Aliasker Rd. Bangalore-52

ಎಂ.ಕೆ.ಅಯ್ಯಪ್ಪ ಭಾ.ಆ.ಸೇ
ಸಹಕಾರಿಗಳ ನಿಬಂಧಕರು
ಕರ್ನಾಟಕ ರಾಜ್ಯ, ಬೆಂಗಳೂರು

9/11/15

7/11

ಇವರಿಗೆ,
ವ್ಯವಸ್ಥಾಪಕ ನಿರ್ದೇಶಕರು,
ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.
'ನಿರ್ಮಾಣ ಭವನ', ಡಾ:ರಾಜ್‌ಕುಮಾರ ರಸ್ತೆ,
1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-560010

# ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,

ನಿರ್ಮಾಣ ಭವನ, ಡಾ.ರಾಜಕುಮಾರ ರಸ್ತೆ, 1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು – 560010

www.souharda.coop, Ph: 080-23378375-80, Email:souharda@souharda.coop


## ತಖ್ತೆ ನಂ – 5

ದಿನಾಂಕ : 20.08.2015 ರಂದು ನಡೆದ ಸಾಮಾನ್ಯ ಸಭೆಯು ಸ್ವೀಕರಿಸಿದ ಉಪವಿಧಿಯ ತಿದ್ದುಪಡಿ ನಕಲುಗಳು

| ತಿದ್ದುಪಡಿಯಾದ ಉಪವಿಧಿ ಸಂಖ್ಯೆ | ತಿದ್ದುಪಡಿ ಸ್ವೀಕರಿಸಿದ ನಂತರ ಆಗುವ ಸದರಿ ಉಪವಿಧಿಯ ಪೂರ್ಣ ವಿವರ |
|---|---|
| 21(4) | ಪ್ರತಿ ಸಹಕಾರಿಯ ಡೆಲಿಗೇಟನು ಆ ಪ್ರಾಂತದಿಂದ ಚುನಾಯಿಸಬೇಕಾದ ನಿರ್ದೇಶಕರ ಸಂಖ್ಯೆಯಷ್ಟು ಮತಗಳನ್ನು ಮಾತ್ರ ಹೊಂದಿರತಕ್ಕದ್ದು. . . . . . |
| 21(4) | Every delegate shall have such number votes equal to the directors to be elected from that region.. . . . . |
| 35ಎ | **35ಎ. ಪ್ರಾಂತೀಯ ನಿರ್ದೇಶಕರ ಸಮಿತಿ**<br>1. ಪ್ರತಿಯೊಂದು ಪ್ರಾಂತಕ್ಕೆ ಸಂಬಂಧಿಸಿದಂತೆ ಆ ಪ್ರಾಂತದ ಸದಸ್ಯ ಸಹಕಾರಿಗಳಿಗೆ ಸಂಬಂಧಿಸಿದಂತೆ ಸಂಯುಕ್ತ ಸಹಕಾರಿಯು ನಿರ್ವಹಿಸಬೇಕಾದ ಶಾಸನಾತ್ಮಕ ಅಧಿಕಾರ/ಕರ್ತವ್ಯಗಳ ಕುರಿತು ಚರ್ಚಿಸಿ ಸಂಭಾವ್ಯ ಕ್ರಮವನ್ನು ಮಂಡಲಿಗೆ ಶಿಫಾರಸ್ಸು ಮಾಡಲು ಮತ್ತು ಸಂಯುಕ್ತ ಸಹಕಾರಿಯ ಕರ್ತವ್ಯಗಳನ್ನು ತ್ವರಿತವಾಗಿ ನಿರ್ವಹಿಸಲು ಪ್ರಾಂತೀಯ ನಿರ್ದೇಶಕರ ಸಮಿತಿ ಇರತಕ್ಕದ್ದು.<br>2. ಪ್ರಾಂತೀಯ ನಿರ್ದೇಶಕರ ಸಮಿತಿಯ ರಚನೆ:<br>1. ಸಂಯುಕ್ತ ಸಹಕಾರಿಯ ಅಧ್ಯಕ್ಷರು — ಅಧ್ಯಕ್ಷರು<br>2. ಆ ಪ್ರಾಂತದಲ್ಲಿನ ಎಲ್ಲಾ ನಿರ್ದೇಶಕರು/ವಿಷಯ ತಜ್ಞರು — ಸದಸ್ಯರು<br>3. ವ್ಯವಸ್ಥಾಪಕ ನಿರ್ದೇಶಕರು — ಸದಸ್ಯ ಕಾರ್ಯದರ್ಶಿ<br>3. ಪ್ರಕಾರ್ಯಗಳು, ಅಧಿಕಾರಗಳು ಮತ್ತು ಕರ್ತವ್ಯಗಳು:<br>1. ಆ ಪ್ರಾಂತದ ಸದಸ್ಯ ಸಹಕಾರಿಗಳಿಗೆ ಸಂಬಂಧಿಸಿದಂತೆ ಸಂಯುಕ್ತ ಸಹಕಾರಿಯು ನಿರ್ವಹಿಸಬೇಕಾದ ಶಾಸನಾತ್ಮಕ ಅಧಿಕಾರ/ಕರ್ತವ್ಯಗಳ ಕುರಿತು ಚರ್ಚಿಸಿ ಸಂಭಾವ್ಯ ಕ್ರಮವನ್ನು ಮಂಡಲಿಗೆ ಶಿಫಾರಸ್ಸು ಮಾಡುವುದು.<br>ಪರಂತು, ಯಾವುದೇ ವಿಷಯದ ಕುರಿತು ಅಂತಿಮ ನಿರ್ಣಯ/ತೀರ್ಮಾನ ಆಡಳಿತ ಮಂಡಲಿಯದಾಗಿರುತ್ತದೆ.<br>2. ಸಹಕಾರ ಚಳುವಳಿಗೆ ತೀವ್ರ ರೀತಿಯಲ್ಲಿ ಹಾನಿಯುಂಟಾಗುವ ಸಂಭವವಿದ್ದಲ್ಲಿ ಅಥವಾ ತುರ್ತು ಕ್ರಮದ ಅವಶ್ಯಕತೆಯಿದ್ದಲ್ಲಿ, ಮಂಡಲಿಯ ಅನುಮೋದನೆಗೆ ಒಳಪಟ್ಟು, ಸೂಕ್ತ ಕ್ರಮ ತೆಗೆದುಕೊಳ್ಳತಕ್ಕದ್ದು.<br>ಪರಂತು, ಇಂತಹ ನಿರ್ಣಯಗಳು, ಮಂಡಲಿಯು ನೀಡುವ ಮಾರ್ಗದರ್ಶಿಗಳಿಗೆ ಒಳಪಟ್ಟಿರತಕ್ಕದ್ದು.<br>3. ಮಂಡಲಿಯು ನಿರ್ಣಯದ ಮೂಲಕ ಪ್ರಾಧಿಕೃತವಾದ ಇತರೆ ಯಾವುದೇ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.<br>4. ಮಂಡಲಿಯ ಸಭೆಯನ್ನು ನಡೆಸುವ ಕಾರ್ಯವಿಧಾನವು ಯಥೋಚಿತ ವ್ಯತ್ಯಾಸಗಳೊಂದಿಗೆ ಪ್ರಾಂತೀಯ ನಿರ್ದೇಶಕರ ಸಮಿತಿ ಸಭೆಗಳನ್ನು ನಡೆಸುವುದಕ್ಕೆ ಅನ್ವಯವಾಗತಕ್ಕದ್ದು. ಪ್ರಾಂತೀಯ ನಿರ್ದೇಶಕರ ಸಮಿತಿ ಸಭೆಗಳನ್ನು ಆಯಾ ಪ್ರಾಂತಗಳಲ್ಲಿಯೇ ನಡೆಸುವುದು. |
| 35A | **35A. Regional Directors Committee:**<br>1. There shall be regional director's committee for recommending the |

future course of action to the Board to discharge the statutory duties of the federal cooperative related to the member cooperatives of that region.

2. Constitution of Regional director's committee;
   1) President of the Federal Cooperative — President.
   2) All director's/subject experts of that region — members.
   3) Managing Director — Member Secretary.
3. Functions, Powers and Duties:
   1) Discharging the statutory duties of the federal cooperative relating to the member cooperative of that region and recommending the future course of action to the Board.
      Provided, related to any subjects, decision of the Board is final.
   2) Where there is a possibility of detrimental to the cooperative movement or where there is a exigency, committee has power to take appropriate action against cooperative, subject to approval of the Board.
      Provided, such resolutions shall be in the guidelines of the Board.
   3) Such other duties as may be specified by the resolution of the Board.
4. The procedure for conducting the Board meeting shall mutatis-mutandis apply to regional director's meeting. All the meeting shall be held in respective regions.

ವ್ಯವಸ್ಥಾಪಕ ನಿರ್ದೇಶಕರು | ಆಡಳಿತ ಮಂಡಳಿ ಸದಸ್ಯರು | ಆಡಳಿತ ಮಂಡಳಿ ಸದಸ್ಯರು | ಅಧ್ಯಕ್ಷರು

Karnataka State Souharda Federal Cooperative Ltd.
Reg. No. RSR / SOU / ACT / 136 / Regn 051 / 2001-02 dated - 04-01-2002
* Bangalore *

Office of the Registrar of Co-operatives - Karnataka - Bangalore

ಈ ಕಛೇರಿಯ ಆದೇಶ ಸಂಖ್ಯೆ: ಆರ್‌ಎಸ್‌ಆರ್/ಸೌಕಾ/ಉ.ನಿ.ತಿ/58/2015-16, ದಿನಾಂಕ:11-11-2015 ರ ಅನ್ವಯ ನೋಂದಾಯಿತ ಸಹಕಾರ ಸಂಘದ ಉಪವಿಧಿಗಳ ಸಂಖ್ಯೆ: 21 (ಸ) ತಿದ್ದುಪಡಿಯನ್ನು ಕಾಯ್ದೆ 35A ರನ್ವಯ ನೋಂದಾಯಿಸಲಾಗಿದೆ.

ಸಹಕಾರ ಸಂಘಗಳ ನಿಬಂಧಕರು
ಕರ್ನಾಟಕ ರಾಜ್ಯ, ಬೆಂಗಳೂರು